ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1221/2016

ಚಾಸಾ:3 ಪ್ರಾಸಾ:2

ದಿನಾಂಕ: 01.02.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಘವೇಂದ್ರ |
| ತಂದೆಯ ಹೆಸರು | : | ಕುಷ್ಟ ಕುಲಾಲ್ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಅಟೋ ಚಾಲಕ |
| ವಾಸ ಸ್ಥಳ | : | ಮೊಳಹಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 19-011-2015 ರಂದು ಹುಣ್ಸೆಮಕ್ಕಿಯಿಂದ ಕೆದೂರಿಗೆ ಬಾಡಿಗೆಗೆ ಪೊಲೀಸರು ಕರೆಯಿಸಿದ್ದು ಅವರೊಂದಿಗೆ ಹೋಗಿ ಬಂದಿರುತ್ತೇನೆ. ಅದನ್ನು ಬಿಟ್ಟು ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ.

ಸಾಕ್ಷಿಗೆ ದಿ: 27-11-2015ರ ಸ್ವತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಯಾವಾಗ ಮಾಡಿದೆ ಎಂದು ನನಗೆ ತಿಳಿದಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿ ನಿಪಿ-8 ಮತ್ತು 9 ನ್ನು ನೋಡಿ ತನ್ನ ಅಟೋ ಎಂದು ಗುರುತಿಸಿರುತ್ತಾರೆ. ನಿಪಿ-8 ರಲ್ಲಿ ನನ್ನ ಅಟೋದ ಗಾಜು ಒಡೆದಿರುವುದು ಕಂಡು ಬರುತ್ತದೆ.

ಸಾಕ್ಷಿ ಇಂಡಿಮಿನಿಟಿ ಬಾಂಡ್ ಮತ್ತು ಸ್ವೀಕೃತಿಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-11 ಮತ್ತು 12 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-11(ಎ) ಮತ್ತು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ1 ರಿಂದ 3ನ್ನು ನೋಡಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 19-11-2015 ರಂದು ನಾನು ಪೊಲೀಸರೊಂದಿಗೆ ನನ್ನ ಅಟೋವಿನಲ್ಲಿ ಹೋಗಿರುತ್ತೇನೆ ಎಂದರೆ ಸರಿ. ಆ ದಿನ ಚಾಸಾ-2ರವರು ಒಂದು ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯಾದ 1ನೇ ಆರೋಪಿಯನ್ನು ನನ್ನ ಅಟೋದಲ್ಲಿ ದಸ್ತಗಿರಿ ಮಾಡಿ ಕರೆದುಕೊಂಡು ಹೋಗುತ್ತಿದ್ದಾಗ ಆರೋಪಿತರೆಲ್ಲರೂ ಏಕಾಏಕಿ ನನ್ನ ಅಟೋವನ್ನು ಅಡ್ಡಗಟ್ಟಿ ಅಟೋವನ್ನು ಪಲ್ಟಿ ಮಾಡಲು ಪ್ರಯತ್ನಿಸಿ ಉಳಿದ ಆರೋಪಿತರು ಚಾಸಾ-1ರವರಿಗೆ ಹೊಡೆದು ಬೈದು ಅವರ ಸಮವಸ್ತ್ರವನ್ನು ಹರಿದು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅನಂತರ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಇದರಿಂದ ನನ್ನ ರಿಕ್ಷಾ ಜಖಂಗೊಂಡಿದ್ದು, ಈ ಪ್ರಕರಣ ದಾಖಲಾದ ನಂತರ ಪೊಲೀಸರು ದಿಃ 27-11-2015 ರಂದು ಪಂಚನಾಮೆಯನ್ನು ಬೆಳಗ್ಗೆ 10 ರಿಂದ 10-30ರವರೆಗೆ ಜರುಗಿಸಿ ನನ್ನ ಅಟೋ ಜೊತೆಗೆ ಮುಮಾ1 ರಿಂದ 3ನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅನಂತರ ನಾನು ಸೂಕ್ತ ಬಾಂಡ್ ನೀಡಿ ವಾಹನವನ್ನು ಪಡೆದುಕೊಂಡು ರಶೀದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ನಾನು ದಿಃ 20-11-2015 ರಂದು ತನಿಖಾಧಿಕಾರಿಯವರಿಗೆ ಹಾಗೂ ದಿಃ 28-11-2015 ರಂದು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಗಳನ್ನು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಪರಿಚಯಸ್ಥರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**